ಶ್ರೀ ಕೆ. ಎಫ್. ಪಾಟೀಲ್ :—ಲೈಬ್ರೆರಿ ಸೆಸ್ ಕಲೆಕ್ಟ್ ಮಾಡಿ ಆ ಸಂಪನ್ಮೂಲಗಳನ್ನು ಸರ್ಕಾರದವರು ಜನರಲ್ ಪೂಲಿನಲ್ಲಿ ಸೇರಿಸದೆ ಮತ್ತು ನಗರ ಸಭೆಗಳ ಜನರಲ್ ಪೂಲ್‌ನಲ್ಲಿ ಸೇರಿಸದೆ ಪ್ರತ್ಯೇಕವಾಗಿ ಅದನ್ನು ಇರಿಸುವ ಹಾಗೆ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಮೊನ್ನೆ ತಾನೇ ಸ್ಟೇಟ್ ಲೈಬ್ರೆರಿಯಲ್ಲಿ ಮಾನ್ಯ ಸದಸ್ಯರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ.

SRI J. P. SARVESH :—May I know whether the services of temporary employees are terminated every year ? Why not the Government get rid of this system ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ನಾವೀಗ ಖಾಯಂ ಸಿಬ್ಬಂದಿಯನ್ನು ನೇಮಕ ಮಾಡಬೇಕೆಂದಿದೆ. 454 ಜನರನ್ನು ನೇಮಿಸಬೇಕೆಂಬ ಪ್ರೊಪೋಜಲ್ಸ್ ಸರ್ಕಾರದ ಮುಂದೆ ಇದೆ ಈಗ ಇರುವ ಹಾಗೆ ಯಾವ ಸ್ಯಾಂಕ್ಷನ್ಡ್ ಪೋಸ್ಟ್‌ನಲ್ಲಿಯೂ ಆಯಾ ಕೆಲಸ ಮಾಡುತ್ತಾ ಇಲ್ಲ. ಆದ್ದರಿಂದ 1965ನೇ ಇಸವಿಯಲ್ಲಿಯೇ ಆಗಿನ ಮಂತ್ರಿಮಂಡಲದಲ್ಲಿ ಒಂದು ವಿಷಯ ನಡೆದು ಅವಶ್ಯಕವಿದ್ದಾಗ ಇದನ್ನು ಮಾಡಿಕೊಳ್ಳಬೇಕೆಂದು ಆಗಲೇ ಒಂದು ಸ್ಟೇಟ್ ಲೆವಲ್ ಕಮಿಟಿಯನ್ನು ಮಾಡಿದ ಮೇಲೆ ಅವರು ಅದನ್ನು ಪರ್ಯಾಲೋಚನೆ ಮಾಡುತ್ತಾ ಇದ್ದಾರೆ

ಆದ್ಯಕ್ಷರು :—ಪ್ರಶ್ನೆ ನಂ. 463 ಶ್ರೀ ಟಿ. ಎಂ. ಮಂಜುನಾಥ್ ಅವರು ಕೇಳುವುದಕ್ಕೆ ನಾನು ಅನುಮತಿ ಕೊಟ್ಟಿದ್ದೇನೆ.

*Conversion of Junior Colleges as First Grade Colleges

463. SRI T. M. MANJUNATH (Tiptur) (on behalf of SRI N. BASAVAIAH (Chicknayakanahalli) :—

Will the Minister for Education be pleased to state :—

(a) the number of separate Government Junior Colleges in the State upgraded which are not high schools and whether the said colleges will be converted as First Grade Colleges since the work load of the teachers working there will be less;

(*b*) if so, whether the Government Junior College in Chicknayakanahalli will be converted as First Grade College ?

SRI M. MALLIKARJUNASWAMY (Minister for Education) :—

(*a*) One. There is no possibility of converting it as a First Grade College.

(*b*) No.

ಶ್ರೀ ಟಿ. ಎಂ. ಮಂಜುನಾಥ್ :—ತಮಗೆ ಗೊತ್ತಿರುವ ಹಾಗೆ ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಹಾಜರಾತಿ ಜಾಸ್ತಿಯಾಗಿರುವುದರಿಂದ ಅನೇಕ ಕಾಲೇಜುಗಳಲ್ಲಿ ಹಳ್ಳಿಯ ಮಕ್ಕಳಿಗೆ ಸ್ಥಳಾವಕಾಶ ಇಲ್ಲವೆಂಬುದು ಗೊತ್ತಿದೆಯೇ ? ಇಂತಹ ಸಂದರ್ಭದಲ್ಲಿ ಜೂನಿಯರ್ ಕಾಲೇಜನ್ನು ಸ್ಥಾಪನೆ ಮಾಡುವ ಅವಶ್ಯಕತೆ ಕಂಡು ಬಂದಿದೆಯೆಂದು ತಾವು ಹೇಳುವುದರಿಂದ ಫಸ್ಟ್ ಗ್ರೇಡ್ ಕಾಲೇಜನ್ನು ಈಗಲಾದರೂ ಸ್ಥಾಪನೆ ಮಾಡುವುದನ್ನು ಪುನರ್‌ವಿಮರ್ಶೆ ಮಾಡುತ್ತಿದ್ದೀರಾ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಫಸ್ಟ್ ಗ್ರೇಡ್ ಕಾಲೇಜನ್ನು ಸ್ಥಾಪನೆ ಮಾಡುವ ವಿಷಯವೇ ಬೇರೆ. ಈಗಿನ ಗೌರ್ನಮೆಂಟ್ ಪಾಲಿಸಿ ಪ್ರಕಾರವಾಗಿ ಜೂನಿಯರ್ ಕಾಲೇಜುಗಳನ್ನು ನಾವು ಬೈಫರ್‌ಕೇಟ್ ಮಾಡಿ ಅವನ್ನು ಇಂಡಿಪೆಂಡೆಂಟ್ ಜೂನಿಯರ್ ಕಾಲೇಜುಗಳನ್ನಾಗಿ ಇಡಬೇಕೆಂದು ಸರ್ಕಾರದ ನೀತಿ.

ಶ್ರೀ ಟಿ. ಎಂ. ಮಂಜುನಾಥ್ :—ತಮ್ಮ ರೂಲ್ಸ್ ಪ್ರಕಾರ ಇಂಡಿಪೆಂಡೆಂಟ್ ಜೂನಿಯರ್ ಕಾಲೇಜಾಗಿ ಅದನ್ನು ಇಡಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೀರಿ. ನಾವು ಹೇಳಿದ್ದು ಅದನ್ನು ಜೂನಿಯರ್ ಕಾಲೇಜಾಗಿ ಪರಿವರ್ತನೆ ಮಾಡಿದ್ದೀರೆಂದು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನತೆಗೆ ಅದರ ಬಗ್ಗೆ ಹೆಚ್ಚಿನ ಸೌಕರ್ಯಗಳನ್ನು ಕೊಡುವ ಉದ್ದೇಶದಿಂದ ಇಲ್ಲಿ ಅದರ ಅವಶ್ಯಕತೆ ಕಂಡು ಬರುತ್ತದಲ್ಲವೇ ? ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೆಡ್‌ಕ್ವಾರ್ಟರ್ಸ್ ಇರುವ ಕಡೆ ಆ ರೀತಿ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಚಿಕ್ಕನಾಯಕನಹಳ್ಳಿಯಲ್ಲೇ ಮಾಡಬೇಕೆಂದಿಲ್ಲ. It is the policy of the Government to have Independent Junior Colleges bifurcating PUC from degree classes, in a phased manner.